<u>ಸಾಕ್ಷಿಯನ್ನು ದಿಃ 17-11-2020 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀಮತಿ ಎಂ ಎಂ ವಕೀಲರಿಂದಃ</u>**

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಜನ್ಮ ದಿನಾಂಕಃ 18.06.1972 ಆಗಿದೆ. ಪ್ರಸ್ತುತ ದಾವೆಯನ್ನು ಹೊರತು ಪಡಿಸಿ ಈ ನ್ಯಾಯಾಲಯದ ಹಲವಾರು ಪ್ರಕರಣಗಳಲ್ಲಿ ನಾನು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿಗಳು ದಾಸಣ್ಣ, ಸಿದ್ದಪ್ಪ ಹಾಗೂ ಜಯಮ್ಮನ ವಿರುದ್ಧ ಪಾಲುವಿಭಾಗ ಕೋರಿ ಹೂಡಿದ್ದಾರೆ. ವಾದಿಗಳು ಬಾಲೇನಹಳ್ಳಿ ಗ್ರಾಮದ ಸರ್ವೆ ನಂ.106/2 ರಲ್ಲಿನ ಜಮೀನಿನಲ್ಲಿ ಪಾಲು ವಿಭಾಗ ಕೋರಿ ದಾವೆ ಹೂಡಿದ್ದಾರೆ.

ದಾವಾಸ್ತಿಯ ಪೂರ್ವಕ್ಕೆ ಹಟ್ಟಿ ತಿಮ್ಮಯ್ಯ ಹಾಗೂ ಗೊಪಾಲಪ್ಪನ ಜಮೀನು, ಪಶ್ಚಿಮಕ್ಕೆ ಓಬಣ್ಣ ಹಾಗೂ ಪಾತಪ್ಪನ ಜಮೀನು, ಉತ್ತರಕ್ಕೆ ಹರ್ತಿಕೋಟೆ ಗಡಿ ಇದು ದಕ್ಷಿಣಕ್ಕೆ ಕರಡಪ್ಪನ ಜಮೀನು ಇದೆ. ಈ ದಾವೆಯಲ್ಲಿ ಸಾಕ್ಷಿ ಹೇಳಬೇಕೆಂದು ವಾದಿಗಳೆಲ್ಲರೂ ನನ್ನನ್ನು ಕೇಳಿಕೊಂಡಿದ್ದರು. ವಾದಿ-ಪ್ರತಿವಾದಿಗಳು ಹಾಗೂ ನಾನು ಒಂದೇ ಊರಿನವರದಾದುರಿಂದ ನನಗೆ ಅವರ ಪರಿಚಯವಿದೆ. ವಾದಿ-ಪ್ರತಿವಾದಿಗಳ ಮೂಲ ಪುರುಷ ಯಾವಾಗ ಮೃತಪಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು, ತಾನು ಹುಟ್ಟುವುದಕ್ಕಿಂತ ಮುಂಚೆ ಆತ ಮೃತಪಟ್ಟಿದ್ದ ಎಂದು ಉತ್ತರಿಸುತ್ತಾರೆ. ಸದರಿ ಕರಿಯಪ್ಪ ವಾದಿಗಳಿಗೆ ತಾತನಾಗಬೇಕು. ಮೃತ ಕರಿಯಪ್ಪನಿಗೆ 6 ಜನ ಮಕ್ಕಳು. ಅವರ ಹೆಸರು ಅಜ್ಜಪ್ಪ, ದೊಣ್ಣೆ ಓಬಣ್ಣ, ಮೇಕೆ ಚಿಕ್ಕಣ್ಣ, ಸಣ್ಣಿ ಕರಿಯಪ್ಪ, ಕುರುಡು ಓಬಣ್ಣ ಹಾಗೂ ಮೂಟೆ ಕರಿಯಪ್ಪ.

ಕರಿಯಪ್ಪನ ಮಕ್ಕಳಲ್ಲಿ ದೊಣ್ಣೆಓಬಣ್ಣ ಹಾಗೂ ಕುರುಡು ಓಬಣ್ಣನಿಗೆ ಮದುವೆಯಾಗಿರಲಿಲ್ಲ. ಅಜ್ಜಪ್ಪ ಹಾಗೂ ಮೂಟೆಕರಿಯಪ್ಪನಿಗೆ ಮದುವೆಯಾದರೂ

ಮಕ್ಕಳಾಗಿರಲಿಲ್ಲ. ಮೇಕೆ ಚಿಕ್ಕಣ್ಣ ವಾದಿಗಳ ತಾತ ಎಂದರೆ ಸರಿ. 1 ನೇ ಪ್ರತಿವಾದಿ ಮೇಕೆ ಚಿಕ್ಕಣ್ಣನ ಒಬ್ಬನೇ ಮಗ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಸಣ್ಣ ಕರಿಯಪ್ಪನ ಮಕ್ಕಳು ಎಂದರೆ ಸರಿ. ದೊಣ್ಣೆಓಬಣ್ಣ ಹಾಗೂ ಕುರುಡು ಓಬಣ್ಣ 50–60 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ, ಆದರೆ ಮೃತಪಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

ವಾದಿ–ಪ್ರತಿವಾದಿಗಳಿಗೆ ದಾವಾಸ್ತಿಯನ್ನು ಹೊರತು ಪಡಿಸಿ ಇನ್ನೂ ಬೇರೆ ಆಸ್ತಿಗಳು ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಸ್ವಂತ ಆಸ್ತಿಗಳು ಇದ್ದವು ಎಂದು ಉತ್ತರಿಸುತ್ತಾರೆ. ಯಾರಿಗೆ ಸ್ವಂತ ಆಸ್ತಿಗಳು ಇದ್ದವು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 1 ನೇ ಪ್ರತಿವಾದಿ ಖರೀದಿಸಿದ ಸ್ವತ್ತುಗಳು ಇದ್ದವು ಎಂದು ಉತ್ತರಿಸುತ್ತಾರೆ. ಅವುಗಳನ್ನು 20 ವರ್ಷಗಳ ಪೂರ್ವದಲ್ಲಿ 1 ನೇ ಪ್ರತಿವಾದಿ ಕೊಂಡುಕೊಂಡಿದ್ದರು. ಅದು ಸರ್ವೆ ನಂ.108/1 ಪಿ 2 ರಲ್ಲಿ ಎಂದರೆ ಸರಿ. ಅದರ ವಿಸ್ತೀರ್ಣ 5 ಎಕರೆ 4 ಗುಂಟೆ ಎಂದರೆ ಸರಿ. ಮೂಲ ಪುರುಷ ಕರಿಯಪ್ಪನಿಗೆ ಸೇರಿದ 2 ಮನೆಗಳು ಇವೆ ಎಂದರೆ ಸಾಕ್ಷಿ ಕೇವಲ ಒಂದು ಮನೆ ಇದೆ ಎಂದು ಉತ್ತರಿಸುತ್ತಾರೆ. ಆ ಮನೆಯಲ್ಲಿ ವಾದಿಗಳು ವಾಸವಾಗಿಲ್ಲ ಎಂದರೆ ಸರಿ. ಆ ಮನೆ ಖಾಲಿ ಇದೆ. ಸದರಿ ಮನೆಯನ್ನು ಹಾಗೂ ಸರ್ವೆ ನಂ.108/1 ಪಿ2 ರಲ್ಲಿನ ಜಮೀನನ್ನು ವಾದಿಗಳು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ವಾದಿ–ಪ್ರತಿವಾದಿಗಳು ಇಂದಿಗೂ ಸಹ ಅವಿಭಕ್ತ ಕುಟುಂಬದಲ್ಲಿ ವಾಸವಾಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ–ಪ್ರತಿವಾದಿಗಳು ಅವಿಭಕ್ತಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ಅವರು ಜೊತೆಯಲ್ಲಿ ವಾಸವಾಗಿಲ್ಲ ಎಂದರೆ ಸರಿ. ದಾವಾಸ್ತಿಯ ಬಗ್ಗೆ ವಾದಿಪ್ರತಿವಾದಿಗಳ ತಾತಂದಿರ ನಡುವೆ ಯಾವ ವ್ಯವಹಾರ ನಡೆದಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಈಗ್ಗೆ 50 ವರ್ಷಗಳ ಹಿಂದೆ ದಾವಾಸ್ತಿಯನ್ನು ಮೂಲ ಪುರುಷ ಕರಿಯಪ್ಪನ ಮಕ್ಕಳಾದ ಮೂಟೆಕರಿಯಪ್ಪ, ಸಣ್ಣಕರಿಯಪ್ಪ, ಅಜ್ಜಪ್ಪ ಹಾಗೂ ಮೇಕೆಚಿಕ್ಕಣ್ಣ ಜುಬಾನಿ ಪಾಲುವಿಭಾಗ

ಮಾಡಿಕೊಂಡದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಆ ವಿಭಾಗದನ್ವಯ ಪೂರ್ವದಿಕ್ಕಿನಲ್ಲಿರುವ ದಾವಾಸ್ತಿಯ 4 ಎಕರೆ ಜಮೀನನ್ನು ಮೂಟೆ ಕರಿಯಪ್ಪನಿಗೂ ಅದಕ್ಕೆ ಲಗತ್ತಾಗಿ 4 ಎಕರೆ 20 ಗುಂಟೆ ಜಮೀನನ್ನು ಸಣ್ಣ ಕರಿಯಪ್ಪನಿಗೂ ಅದಕ್ಕೆ ಲಗತ್ತಾಗಿ 4 ಎಕರೆ 10 ಗುಂಟೆ ಜಮೀನನ್ನು ಅಜ್ಜಪ್ಪನಿಗೂ ಹಾಗೂ 4 ಎಕರೆ 20 ಗುಂಟೆ ಜಮೀನನ್ನು ಮೇಕೆ ಚಿಕ್ಕಣ್ಣನಿಗೂ ಭಾಗ ಮಾಡಿಕೊಡಲಾಗಿತ್ತು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ತನ್ನ ಪಾಲಿಗೆ ಬಂದ 4 ಎಕರೆ 10 ಗುಂಟೆ ಜಮೀನನ್ನು ಅಜ್ಜಪ್ಪ ದಿಃ05.11.1977 ರಂದು ಸಣ್ಣ ಕಯಪ್ಪನಿಗೆ ನೊಂದಾಯಿತ ಮೃತ್ಯುಪತ್ರ ಬರೆದುಕೊಟ್ಟಿದ್ದಾನೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದರಂತೆ ಮೂಟೆ ಕರಿಯಪ್ಪನಿಗೆ ಮಕ್ಕಳಿಲ್ಲದ ಕಾರಣ ಆತ ತನ್ನ ಪಾಲಿಗೆ ಬಂದಿದ್ದ 4 ಎಕರೆ ಜಮೀನನ್ನು ದಿಃ21.07.1993 ರಂದು 2 ನೇ ಪ್ರತಿವಾದಿಗೆ ನೋಂದಯಿತ ಮೃತ್ಯು ಪತ್ರ ಮಾಡಿಕೊಟ್ಟಿದ್ದಾನೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಅಜ್ಜಪ್ಪ 2001 ರಲ್ಲಿ ಮರಣ ಹೊಂದಿದ್ದಾನೆ ಎಂದರೆ ಸರಿಯಲ್ಲ. ಅಜ್ಜಪ್ಪ ಯಾವ ಸಾಲಿನಲ್ಲಿ ಮೃತಪಟ್ಟಿದ್ದಾರನೆ ಎನ್ನುವುದು ನನಗೆ ಗೊತ್ತಿಲ್ಲ. ಮೂಟೆ ಕರಿಯಪ್ಪ 2002 ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದರಂತೆ 2002 ರಲ್ಲಿ ಸಣ್ಣ ಕರಿಯಪ್ಪ ಮೃತಪಟ್ಟಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅಜ್ಜಪ್ಪ ಮೃತ ಪಟ್ಟ ನಂತರ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಸಣ್ಣ ಕರಿಯಪ್ಪ ಅರ್ಜಿ ನೀಡಿದ ವಿಚಾರ ನನಗೆ ಗೊತ್ತಿಲ್ಲ. ಮೂಟೆ ಕರಿಯಪ್ಪ ಮೃತಪಟ್ಟ ನಂತರ ಮೃತ್ಯು ಪತ್ರದ ಆಧಾರದ ಮೇಲೆ ತನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡುವಂತೆ 2 ನೇ ಪ್ರತಿವಾದಿ ತಹಶೀಲ್ದಾರರಿಗೆ ಅರ್ಜಿ ಕೊಟ್ಟಿದ್ದ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದಕ್ಕೆ ವಾದಿಗಳ ತಂದೆ ತಕರಾರು

ಸಲ್ಲಿಸಿದ್ದ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ತದ ನಂತರ ದಾಸಣ್ಣ ಪಾಲುವಿಭಾಗ ಕೋರಿ ಹಿರಿಯೂರಿನ ನ್ಯಾಯಾಲಯದಲ್ಲಿ ಓಎಸ್ 19/2002 ಎನ್ನುವ ದಾವೆ ಹೂಡಿದ್ದರು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಾವೆ ದಿಃ05.01.2005 ರಂದು ವಜಾಗೊಂಡಿದೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಸದರಿ ತೀರ್ಪನ್ನು ಪ್ರಶ್ನಿಸಿ ದಾಸಣ್ಣ ಚಿತ್ರದುರ್ಗದ ನ್ಯಾಯಾಲಯದಲ್ಲಿ ಆರ್ ಎ.11/2005 ಎನ್ನುವ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಹಿರಿಯೂರಿನಲ್ಲಿ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯ ಪ್ರಾರಂಭವಾದ ನಂತರ ಆ ಮೇಲ್ಮನವಿ ಈ ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ಆರ್ ಎ.54/2006 ಎಂದು ದಾಖಲಾಗಿತ್ತು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಾವೆ 30.01.2008 ರಂದು ವಜಾಗೊಂಡಿದೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

2001 ರಿಂದ 2 ನೇ ಪ್ರತಿವಾದಿ ದಾವಾ ಸರ್ವೆ ನಂಬರಿನ ಪೂರ್ವ ಭಾಗದ 12 ಎಕರೆ 30 ಗುಂಟೆ ಜಮೀನಿನ ಸ್ವಾದೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಗಳು ಹಾಗೂ 1 ನೇ ಪ್ರತಿವಾದಿಯ ಹೆಂಡತಿ ಪಶ್ಚಿಮ ಭಾಗದ ದಾವಾಸ್ತಿಯ 4 ಎಕರೆ 20 ಗುಂಟೆ ಜಮೀನಿನ ಸ್ವಾದೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಮಭಾಗದಲ್ಲಿ ಸ್ವಾದೀನತೆಯಲ್ಲಿ ಇದ್ದಾರೆ ಎಂದು ಉತ್ತರಿಸುತ್ತಾರೆ. ಆ ಜಮೀನು ಯಾವತ್ತೂ ಸರ್ವೆ ಆಗಿಲ್ಲ. ವಾದಿಗಳು ದಾವಾಸ್ತಿಯ ಸಮಭಾಗದಲ್ಲಿ ಸ್ವಾದೀನತೆಯಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾಸ್ತಿಯಲ್ಲಿ 50 ಬೇವಿನ ಮರ ಹಾಗೂ 2 ಹುಣಸೆ ಮರಗಳು ಇವೆ ಎಂದು ನಾನು ಅಂದಾಜಿನಲ್ಲಿ ಹೇಳಿದ್ದೇನೆ. ಆ ಮರಗಳ ಬಗ್ಗೆ ನಿಪಿ-1 ರಲ್ಲಿ ನಮೂದು ಇಲ್ಲ ಎಂದರೆ ಸರಿ.

ದಾವಾಸ್ತಿಯಲ್ಲಿ ಯಾವುದೇ ಮರಗಳು ಇಲ್ಲ ಎಂದರೆ ಸರಿಯಲ್ಲ. ವಾದಿಗಳ ಮಾತು ಕೇಳಿಕೊಂಡು ದಾವಾಸ್ತಿಯಲ್ಲಿ ಮರಗಳು ಇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಾಗಲೀ ಅವರ ತಂದೆಯಾಗಲೀ 2 ಮತ್ತು 3 ನೇ ಪ್ರತಿವಾದಿಗಳ ಜೊತೆ ಯಾವತ್ತೂ ದಾವಾಸ್ತಿಯ ಜಂಟಿ ಸ್ವಾಧೀನತೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಗಳು-ಪ್ರತಿವಾದಿಗಳೂ ತಲಾ ಒಂದೊಂದು ಮರದಂತೆ ಅನುಭವಿಸುತ್ತಿದ್ದಾರೆ ಎಂದು ಉತ್ತರಿಸುತ್ತಾರೆ. ವಾದಿ-ಪ್ರತಿವಾದಿಗಳ ಮನೆಯವರ ವಿಷಯ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗಳು ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ವ ಭಾಗದ ದಾವಾಸ್ತಿಯ 12 ಎಕರೆ 30 ಗುಂಟೆ ಜಮೀನಿನಲ್ಲಿ 2 ನೇ ಪ್ರತಿವಾದಿಯನ್ನು ಹೊರತು ಪಡಿಸಿ ಬೇರೆ ಯಾರಿಗೂ ಹಕ್ಕು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ.

ಮೂಲ ಪುರುಷ ಕರಿಯಪ್ಪನ ಹೆಸರಿನಲ್ಲಿ ಇದ್ದ ಮನೆಯೂ ಸಹ ಮೃತ್ಯು ಪತ್ರದ ಆಧಾರದ ಮೇರೆಗೆ 2 ನೇ ಪ್ರತಿವಾದಿಯ ಸ್ವಾಧೀನತೆಯಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಅರ್ಧ ಭಾಗದ ದಾವಾಸ್ತಿ 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ಅದು ವಾದಿ-ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ಸಂಖ್ಯೆ 1(ಎ) ಪರ ಶ್ರೀ ಜೆ ಕೆ ಎಂ ವಕೀಲರಿಂದಃ**

(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ಪ್ರತಿವಾದಿ ಸಂಖ್ಯೆ 1(ಎ) ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).
ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.